## ರೈತ ಮಿತ್ರ

**ನುಗ್ಗೆಯಲ್ಲಿ ಲಭ್ಯವಿರುವ ತಳಿಗಳಾವುವು ಹಾಗೂ ನಾಟಿ ಮಾಡಲು ಸೂಕ್ತ ಕಾಲ ಯಾವುದು?**

ಾ ರಾಮಬಾಬು ಕೊರಟಗೆರೆ

**ನು**ಗ್ಗೆಯಲ್ಲಿ ಪ್ರಚಲಿತವಿರುವ ತಳಿಗಳಿಂದರೆ, **ಪಿ.ಕೆ.ಎಂ-1:** ಇದು ತಮಿಳುನಾಡಿನ ಗಿಡ್ಡ ಜಾತಿಯ ತಳಿ, ಸುಮಾರು 50-65 ಸೆಂ.ಮೀ. ಉದ್ದನೆಯ 150-200 ಕಾಯಿಗಳನ್ನು ಪ್ರತಿ ವರ್ಷಕ್ಕೆ ಪ್ರತಿ ಗಿಡ ಕೊಡುತ್ತದೆ. ಮೆತ್ತನೆಯ ತಿರುಳು ಮತ್ತು ಉತ್ತಮ ರುಚಿಯನ್ನು ಹೊಂದಿರುತ್ತದೆ. **ಭಾಗ್ಯ (ಕೆ.ಡಿ.ಎಮ್-01):** ಈ ತಳಿಯು ಸಹ ಗಿಡ್ಡ ಜಾತಿಯಾಗಿದ್ದು, ಶೀಘ್ರವಾಗಿ ಹೂ ಬಿಡುತ್ತದೆ (100-110 ದಿನಗಳು ನಾಟಿ ಮಾಡಿದ ನಂತರ). ಈ ತಳಿಯ ವೈಶಿಷ್ಟತೆಯೆಂದರೆ, ಕಾಯಿಯು 60 ರಿಂದ 70 ಸೆಂ.ಮೀ.ವರೆಗೆ ಉದ್ದವಾಗಿದ್ದು ಕಡು ಹಸಿರು ಬಣ್ಣ ಹೊಂದಿರುತ್ತದೆ. ಮೊದಲನೇ ವರ್ಷದಲ್ಲಿ ಪ್ರತಿಗಿಡ 200ರಿಂದ 300 ಕಾಯಿಗಳನ್ನು, ಎರಡನೇ ವರ್ಷದಿಂದ ಪ್ರತಿ ಗಿಡ 600ರಿಂದ 800ಕ್ಕೂ ಹೆಚ್ಚು ಕಾಯಿಗಳನ್ನು ನೀಡುತ್ತದೆ. ನಾಟಿ ಮಾಡಲು ಜೂನ್-ಜುಲೈ (ಮುಂಗಾರು) ಸೂಕ್ತ ಕಾಲ. ನೀರಾವರಿ ಸೌಲಭ್ಯವಿದ್ದರೆ ವರ್ಷದ ಎಲ್ಲ ಕಾಲದಲ್ಲೂ ಈ ಬೆಳೆಯನ್ನು ನಾಟಿ ಮಾಡಬಹುದು.

ಾ ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

**ನಿಂಬೆ ಬೆಳೆಯಲ್ಲಿ ಕಜ್ಜಿ ರೋಗವನ್ನು ನಿಯಂತ್ರಿಸುವುದು ಹೇಗೆ?**

ಾ ಮಹೇಶ ನೆಲಮಂಗಲ



**ಎ**ಲೆಗಳು ಹಾಗೂ ಹಣ್ಣುಗಳ ಮೇಲೆ ಕಜ್ಜಿ ತರಹದ ಚುಕ್ಕೆಗಳು ಕಂಡುಬಂದು ಎಲೆ ಒಣಗಿ ಉದುರುತ್ತವೆ ಹಾಗೂ ಹಣ್ಣುಗಳು ಕೊಳೆಯುತ್ತವೆ. **ನಿರ್ವಹಣೆ:** ರೋಗ ತಗುಲಿದ ಭಾಗಗಳನ್ನು ಕತ್ತರಿಸಿದ ಮೇಲೆ ಪ್ರತಿ ಲೀಟರ್ ನೀರಿಗೆ 0.5 ಗ್ರಾಂ ಸ್ಟೆಪ್ಟೋಮೈಸಿನ್ ಸಲ್ಫೇಟ್ ಹಾಗೂ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಶೇ.50 ಡಬ್ಲ್ಯೂ. ಪಿ. ಅಥವಾ ಶೇ.1ರ ಬೋರ್ಡೋ ದ್ರಾವಣ ಸಿಂಪಡಿಸಬೇಕು. ಅವಶ್ಯವಿದ್ದಲ್ಲಿ ಮತ್ತೆ ಇದೇ ಸಿಂಪರಣೆಯನ್ನು ಪುನರಾವರ್ತಿಸಬೇಕು.

ಾ ಕು. ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

# ರೈತರ ಕಳೆಗುಂದಿಸಿದ ಕೀಟನಾಶಕ ದರ!

## ರಷ್ಯಾ-ಯೂಕ್ರೇನ್ ಯುದ್ಧದ ಪರಿಣಾಮ | ಕೃಷಿ ವೆಚ್ಚ ಸರಿದೂಗಿಸುವ ಒತ್ತಡ

■ ಮರಿದೇವ ಹೂಗಾರ ಹುಬ್ಬಳ್ಳಿ

ಕೂಲಿ ಕಾರ್ಮಿಕರ ಕೊರತೆ ಸೇರಿ ಬೇರೆ ಬೇರೆ ಕಾರಣಗಳಿಗಾಗಿ ಕೃಷಿ ದಿನದಿಂದ ದಿನಕ್ಕೆ ದುಬಾರಿಯಾಗುತ್ತಲೇ ಇದ್ದು, ರೈತ ಸಮುದಾಯ ಸಂಕಷ್ಟದಲ್ಲೇ ಹಾಗೂ ಹೀಗೂ ಸರಿದೂಗಿಸಿಕೊಂಡು ಹೋಗುತ್ತಿದೆ. ಆದರೆ ಈ ವರ್ಷ ರಷ್ಯಾ-ಯೂಕ್ರೇನ್ ಯುದ್ಧ, ಕೋವಿಡ್ ಮತ್ತಿತರ ಕಾರಣಗಳಿಂದ ಕೀಟನಾಶಕಗಳ ಬೆಲೆ ದುಪ್ಪಟ್ಟಾಗಿದ್ದು, ರೈತರು ಕಂಗಾಲಾಗಿದ್ದಾರೆ. ಕೃಷಿ ಉತ್ಪಾದನಾ ವೆಚ್ಚ ಹೆಚ್ಚಾಗುವ ಆತಂಕವನ್ನೂ ಎದುರಿಸುತ್ತಿದ್ದಾರೆ.

ರಷ್ಯಾ-ಯೂಕ್ರೇನ್ ಯುದ್ಧದ ಪರಿಣಾಮ ಹಾಗೂ ಚೀನಾದಲ್ಲಿ ಆಬ್ಬರ ಮಾಡಿದ ಕೋವಿಡ್ ಮತ್ತು ಮಾಲಿನ್ಯದಿಂದ ರಸಗೊಬ್ಬರ, ಕಳೆ ಮತ್ತು ಕೀಟನಾಶಕ ಆಮದು ಕಡಿಮೆಯಾಗಿದೆ. ಇದರಿಂದ ಮಾರುಕಟ್ಟೆಯಲ್ಲಿ ದರಗಳು ಏರಿಕೆಯಾಗುತ್ತಿವೆ. 2012ರಿಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ದೇಶಾದ್ಯಂತ ಜಾರಿಗೆ ಬಂದಿದೆ. ಆಗ ಬೆಲೆಗಳಲ್ಲಿ ಶೇ. 12.5 ಏರಿಕೆ ಕಂಡಿತ್ತು. ಇದೇ ರೀತಿ ಏರಿಳಿತವಿದ್ದರೂ ರೈತರು ಎದೆಗುಂದಿರಲಿಲ್ಲ. ಈಗ ಮೊದಲಿಗಿಂತ ಶೇ. 5 ರಿಂದ 17 ಕಳೆ ಮತ್ತು ಕೀಟನಾಶಕಗಳ ದರ ಮಾರುಕಟೆಯಲ್ಲಿ ಹೆಚ್ಚಳವಾಗಿದೆ. ಇದು ರೈತರನ್ನು ಮತ್ತಷ್ಟು ಚಿಂತೆಗೀಡು ಮಾಡಿದೆ.

ಮುಂಗಾರು ಉತ್ತಮ ಆರಂಭ ಕಂಡಿದ್ದು, ರೈತರು ಬಿತ್ತನೆ ರೈತರು ಸಿದ್ಧತೆಯಲ್ಲಿ ತೊಡಗಿದ್ದಾರೆ. ಕಳೆ ಹಾಗೂ ಕೀಟನಾಶಕಗಳನ್ನು ಈಗಾಗಲೆ ತಂದಿಟ್ಟುಕೊಳ್ಳಬೇಕು ಎಂದುಕೊಂಡಿರುವ ರೈತರು, ಬೆಲೆಗಳನ್ನು ಕೇಳಿ ದಂಗಾಗಿ ಹೋಗಿದ್ದಾರೆ.

**ಕೃತಕ ಅಭಾವ?:** ಹಲವು ವ್ಯಾಪಾರಿಗಳು ಕೃತಕ ಅಭಾವ ಸೃಷ್ಟಿ ಮಾಡುತ್ತಿರಬಹುದು ಎಂಬ ಗುಮಾನಿ ಕಾಡುತ್ತಿದೆ. ಕೆಲ ವ್ಯಾಪಾರಿಗಳು ದಾಸ್ತಾನು ಇಟ್ಟುಕೊಂಡಿದ್ದು, ಕಳೆದ ವರ್ಷಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಇದು ಯಥೇಚ್ಛವಾಗಿ ನಡೆಯುತ್ತಿದ್ದು, ಕೃಷಿ ಇಲಾಖೆಯ ಅಧಿಕಾರಿಗಳನ್ನೂ ಕಣ್ತಪ್ಪಿಸಲಾಗುತ್ತಿದೆ.

**ಕಚ್ಚಾ ಪದಾರ್ಥ ಪೂರೈಕೆ ಇಲ್ಲ:** ರಷ್ಯಾ-ಯೂಕ್ರೇನ್‌ನಿಂದ ಕಳೆ ನಾಶಕ ತಯಾರಿಕೆಗೆ ಕಚ್ಚಾ ಪದಾರ್ಥ ಆಮದು ಮಾಡಿಕೊಳ್ಳಲಾಗುತ್ತದೆ. ಯುದ್ಧದ ಪರಿಣಾಮ ಕಚ್ಚಾ ಪದಾರ್ಥಗಳ ಪೂರೈಕೆ ಅಸಾಧ್ಯವಾಗಿದೆ. ಹೆಚ್ಚಿನ ದಾಸ್ತಾನು ಕೊರತೆಯೂ ಇದೆ. ಹಾಗಾಗಿ ಬೆಲೆಗಳು ಗಗನಮುಖಿಯಾಗಿವೆ ಎನ್ನುತ್ತಾರೆ ಹುಬ್ಬಳ್ಳಿಯ ಕಳೆ ಮತ್ತು ಕೀಟನಾಶಕ ಮಾರಾಟಗಾರರೊಬ್ಬರು.



ಹುಬ್ಬಳ್ಳಿಯಲ್ಲಿನ ಫರ್ಟಿಲೈಸರ್ ಅಂಗಡಿಗಳು.

**ಉ**ತ್ಪಾದನಾ ವೆಚ್ಚ ಏರಿಕೆಯಿಂದ ದರ ಹೆಚ್ಚಳವಾಗಿರಬಹುದು. ಕಳೆ ಮತ್ತು ಕೀಟ ನಾಶಕವನ್ನು ಸಂಗ್ರಹಿಸಿಟ್ಟುಕೊಳ್ಳಲು ಬರುವುದಿಲ್ಲ. ಇದು ಕೃತಕ ಅಭಾವ ಸೃಷ ಟಿಯಲ್ಲ.

ಾ ಹೆಸರೇಳಲು ಇಚ್ಛಿಸದ ಕೃಷಿ ಇಲಾಖೆ ಅಧಿಕಾರಿ

| ಕೀಟನಾಶಕ ಔಷಧ (ಪ್ರಮುಖ) | ಹಿಂದಿನ ದರ (ರೂ.ಗಳಲ್ಲಿ) | ಈಗಿನ ದರ |
|---|---|---|
| ರೌಂಡ್ ಅಪ್ | 450 | 800 |
| ಎಕ್ಸೆಲ್ ಮೀರಾ 71 | 650 | 1200 |
| ಟಬ್‌ಡೌನ್ | 590 | 700 |
| ಗ್ಲೇಸೊಫೇಟ್ | 850 | 1450 |



**ಬಿ**ತ್ತನೆ ಬೀಜ, ರಸಗೊಬ್ಬರದ ಬೆಲೆ ಏರಿಕೆಯಾಗಿದೆ. ಈಗ ಕಳೆ ಮತ್ತು ಕೀಟನಾಶಕಗಳ ಬೆಲೆಯೂ ದುಪ್ಪಟ್ಟಾಗಿದೆ. ಮುಂಗಾರು ಆರಂಭವಾಗಿದೆ. ಕೃಷಿ ವೆಚ್ಚ ಹೇಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಆತಂಕವಿದೆ.

ಾ ವೀರಭದ್ರಯ್ಯ ಕಂಬಾಳಿಮಠ ಮಂಟೂರ ರೈತ



ಸಕ್ಕರೆ ಕಾರ್ಖಾನೆಗಳ ಮೋಸದಾಟಕ್ಕೂ ಬೀಳಲಿದೆ ಬ್ರೇಕ್ | ಮಹಾರಾಷ್ಟ್ರ, ಉತ್ತರ ಪ್ರದೇಶ ಮಾದರಿಯಲ್ಲಿ ಅಭಿವೃದ್ಧಿ

# ಕಬ್ಬು ಬೆಳೆಗಾರರ ನೆರವಿಗೆ ಬರಲಿದೆ ಮೊಬೈಲ್ ಆ್ಯಪ್

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ರಾಜ್ಯದ ಸಕ್ಕರೆ ಕಾರ್ಖಾನೆಗಳು ಹಾಗೂ ಕಬ್ಬು ಬೆಳೆಗಾರರ ನಡುವಿನ ವ್ಯವಹಾರವನ್ನು ಸಂಪೂರ್ಣ ಡಿಜಿಟಲೀಕರಣದ ಮೂಲಕ ಪಾರದರ್ಶಕತೆ ತರಲು ದಿಟ್ಟ ಹೆಜ್ಜೆಯನ್ನಿಟ್ಟಿರುವ ಸರ್ಕಾರ, ಅದಕ್ಕಾಗಿ ಹೊಸ ಆ್ಯಪ್ ಅಭಿವೃದ್ಧಿಪಡಿಸಲು ಮುಂದಾಗಿದೆ. ಆ ಮೂಲಕ ಸಕ್ಕರೆ ಕಾರ್ಖಾನೆಗಳ ಕಳ್ಳಾಟಕ್ಕೂ ಬ್ರೇಕ್ ಹಾಕುವ ದೃಢ ನಿರ್ಧಾರ ಮಾಡಿದೆ. ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶದಲ್ಲಿ ಆ್ಯಪ್ ಅಭಿವೃದ್ಧಿ ಮಾಡಿದ್ದು, ಅದರ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಲಾಗಿದೆ. ಕೇಂದ್ರ ಸರ್ಕಾರದ ಆಲೋಚನೆಯಾದ ರೈತರ ಆದಾಯ ದುಪ್ಪಟ್ಟು ಮಾಡುವ ಯೋಜನೆಗೆ ಪೂರಕವಾಗಿ ರಾಜ್ಯದಲ್ಲಿಯೂ ಇದೇ ಮಾದರಿ ಅನುಸರಿಸಲಾಗುತ್ತದೆ.



ವಿ ವಿ|ಶೇ|ಷ

**ಆ್ಯಪ್ ಏಕೆ:** ಕಬ್ಬು ಬೆಳೆಯುವಲ್ಲಿ ಮೂರನೇ ಅತಿದೊಡ್ಡ ರಾಜ್ಯ ಕರ್ನಾಟಕವಾಗಿದ್ದರೆ, ಸಕ್ಕರೆ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. ರಾಜ್ಯದ 16 ಜಿಲ್ಲೆಗಳಲ್ಲಿ ಕಬ್ಬು ಬೆಳೆಯಲಾಗುತ್ತದೆ. ಪ್ರಸ್ತುತ ನಿಯಮಗಳ ಪ್ರಕಾರ, ಕಬ್ಬು ಕಟಾವಿನಿಂದ ಹಿಡಿದು ಸಾಕಣೆ, ಕಾರ್ಖಾನೆಯಲ್ಲಿ ತೂಕ, ಇಳುವರಿ, ಹಣ ಪಾವತಿ ವಿಚಾರದಲ್ಲಿ ರೈತರ ಶೋಷಣೆ ನಡೆಯುತ್ತಿದೆ. ಆ್ಯಪ್ ಅಭಿವೃದ್ಧಿ ಮೂಲಕ ಡಿಜಿಟಲೀಕರಣ ಮಾಡಿದರೆ ರೈತರಿಗೆ ಆಗುವ ಮೋಸ ತಪ್ಪಿ ನಿಯಮದ ಪ್ರಕಾರ ಹಣ ಪಾವತಿಯಾಗುತ್ತದೆ.

**ಕಾರ್ಯ ನಿರ್ವಹಣೆ ಹೇಗೆ?:** ಕಬ್ಬು ಬೆಳೆ ನಾಟಿಯಾದ ಕೂಡಲೇ ರೈತರು ಆ್ಯಪ್‌ನಲ್ಲಿ ನೋಂದಣಿ ಮಾಡಬೇಕು. ಬೆಳೆ ಬರುತ್ತಿದ್ದಂತೆ ಸಿನಿಯಾರಿಟಿಯಲ್ಲಿ ಕಟಾವು ಮಾಹಿತಿ ಕಾರ್ಖಾನೆಗೆ ತಲುಪುತ್ತದೆ. ಅದರಂತೆ ಕಟಾವು ಮಾಡಿ ಸಾಗಣೆ ಮಾಡಬೇಕು. ತೂಕ ಆಗುತ್ತಿದ್ದಂತೆ ಆ್ಯಪ್‌ನಲ್ಲಿ ದಾಖಲಾಗುತ್ತದೆ. ಎಷ್ಟು ಇಳುವರಿ ಬಂದಿದೆ ಎಂಬ ಮಾಹಿತಿ ಸಹ ಸಿಗುತ್ತದೆ. ನಿಯಮದ ಪ್ರಕಾರ, 15 ದಿನದಲ್ಲಿ ಹಣ ಪಾವತಿ ಮಾಡಬೇಕಾಗುತ್ತದೆ. ಇದು ಆ್ಯಪ್ ಕಾರ್ಯನಿರ್ವಹಿಸುವ ವಿಧಾನವಾಗಿದೆ. ಮಹಾರಾಷ್ಟ್ರದಲ್ಲಿ ನೇರವಾಗಿ ಕಾರ್ಖಾನೆ ಮತ್ತು ರೈತರ ನಡುವೆ ವ್ಯವಹಾರವಿದೆ. ಉತ್ತರ ಪ್ರದೇಶದಲ್ಲಿ ಪ್ರತಿ ಹಳ್ಳಿಯಲ್ಲಿಯೂ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಅದರ ಮೂಲಕ ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಆ್ಯಪ್ ಅಭಿವೃದ್ಧಿ ಮಾಡಿಕೊಟ್ಟ ತಂತ್ರಜ್ಞರ ಜತೆ ರಾಜ್ಯ ಸರ್ಕಾರದ ಅಧಿಕಾರಿಗಳು ಮಂಗಳವಾರ (ಜೂ.14) ಸಭೆ ನಡೆಸುತ್ತಿದ್ದಾರೆ. ಮುಂದಿನ ಅಕ್ಟೋಬರ್‌ನಲ್ಲಿ ಹಂಗಾಮು ಆರಂಭವಾಗಲಿದ್ದು ಆ ವೇಳೆಗೆ ಆ್ಯಪ್ ಅಭಿವೃದ್ಧಿ ಪಡಿಸಲಾಗುತ್ತದೆ ಎಂದು ಸಕ್ಕರೆ ನಿರ್ದೇಶನಾಲಯದ ಮೂಲಗಳು ಹೇಳುತ್ತವೆ.

**ಸಮಿತಿ ರಚನೆ:** ಆ್ಯಪ್ ಅಭಿವೃದ್ಧಿ, ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಕ್ಕರೆ ನಿರ್ದೇಶಕರ ನೇತೃತ್ವದಲ್ಲಿ ಕೃಷಿ, ತೂಕ ಮತ್ತು ಆಳತೆ, ಅಬಕಾರಿ ಇಲಾಖೆ ಅಧಿಕಾರಿಗಳ ಸಮಿತಿಯನ್ನು ಸರ್ಕಾರ ರಚಿಸಿ ಮಾಡಿದೆ.



ಹಿಂದೆ ಕಬ್ಬಿನ ಬಾಕಿ ವರ್ಷಗಟ್ಟಲೆ ತೀರುವಳಿ ಆಗುತ್ತಿರಲಿಲ್ಲ. ಈಗ ಅದಕ್ಕೆ ಕಡಿವಾಣ ಹಾಕಿ ಆದಷ್ಟು ಬೇಗ ಪಾವತಿ ಆಗುವಂತೆ ನೋಡಿಕೊಂಡಿದ್ದೇವೆ. ಇದೀಗ ಡಿಜಿಟಲೀಕರಣ ಮೂಲಕ ಪಾರದರ್ಶಕ ವ್ಯವಸ್ಥೆ ತರಲಿದ್ದೇವೆ.

| ಶಂಕರ ಪಾಟೀಲ್ ಮುನೇನಕೊಪ್ಪ ಸಕ್ಕರೆ ಸಚಿವ

ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ನೀಡಿದ ಸಲಹೆಯಂತೆ ಸರ್ಕಾರ ಇದೀಗ ಆ್ಯಪ್ ಅಭಿವೃದ್ಧಿಗೆ ಮುಂದಾಗಿದೆ. ಮುಂದಾದರೂ ಸಕ್ಕರೆ ಕಾರ್ಖಾನೆಗಳಿಂದ ರೈತರ ಶೋಷಣೆ ತಪ್ಪುತ್ತದೆ ಎಂಬ ವಿಶ್ವಾಸವಿದೆ.

| ಕುರುಬೂರು ಶಾಂತಕುಮಾರ್ ಅಧ್ಯಕ್ಷ, ಕಬ್ಬು ಬೆಳೆಗಾರರ ಸಂಘ

ಕಬ್ಬಿನ ಬಾಕಿ ಪಾವತಿ ವಿಳಂಬ ಸೇರಿ ಅನೇಕ ದೂರುಗಳಿವೆ. ಆ್ಯಪ್ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಮುಂದಿನ ಹಂಗಾಮಿನ ವೇಳೆಗೆ ಒಂದು ಕ್ರೋಡೀಕೃತ ವ್ಯವಸ್ಥೆ ತರುತ್ತೇವೆ.

| ಶಿವಾನಂದ ಎಚ್. ಕಳಸೇರಿ ಕಬ್ಬು ಅಭಿವೃದ್ಧಿ ಆಯುಕ್ತ

### ಮೋಸ ನಡೆಯುವುದು ಎಲ್ಲಿ?

- ಬೆಳವಣಿಗೆ ಆದ ಕಬ್ಬನ್ನು ಕಟಾವು ಮಾಡದೇ ಇರುವುದು
- ತೂಕದಲ್ಲಿ ಒಂದು ಲೋಡ್‌ಗೆ ಕನಿಷ್ಠ 2 ಟನ್ ಕಡಿಮೆ ದಾಖಲು
- ಇಳುವರಿಯಲ್ಲಿ ಕಡಿಮೆ ತೋರಿಸುವುದು
- ನಿಯಮದ ಪ್ರಕಾರ 15 ದಿನದಲ್ಲಿ ಪಾವತಿ ಮಾಡದಿರುವುದು
- ಸಕ್ಕರೆ ಉತ್ಪಾದನೆ ಕಡಿಮೆ ತೋರಿಸುವುದರಿಂದ ಸರ್ಕಾರಕ್ಕೆ ತೆರಿಗೆ ವಂಚನೆ
- ಸಕ್ಕರೆ ನಿರ್ದೇಶನಾಲಯಕ್ಕೆ ಸಲ್ಲಿಸುವ ದಾಖಲೆಗಳ ಅಂಕಿ-ಅಂಶಗಳಲ್ಲಿ ವ್ಯತ್ಯಾಸ.

### ಅನುಕೂಲಗಳೇನು?

- ನಿಖರವಾದ ಅಂಕಿ-ಅಂಶ ಲಭ್ಯ
- ಹಣ ಪಾವತಿಸದಿದ್ದರೆ ಉಪ ಉತ್ಪನ್ನಗಳ ಹಣ ರೈತರಿಗೆ ನೀಡಿಕೆ
- ಸರ್ಕಾರ ಸಕ್ಕರೆಗೆ ಗ್ಯಾರಂಟಿ ಕೊಡಿಸಿ ಸಾಲ ಸೌಲಭ್ಯ
- ಕಾರ್ಖಾನೆಗಳ ಮೇಲೆ ಸರ್ಕಾರದ ಸಂಪೂರ್ಣ ನಿಯಂತ್ರಣ
- ಉಪ ಉತ್ಪನ್ನಗಳ ಉತ್ಪಾದನೆಯ ಮಾಹಿತಿ
- ಕಾರ್ಖಾನೆಗಳಿಂದ ಸರ್ಕಾರಕ್ಕೆ ಮ್ಯಾನ್ಯುವಲ್ ಮಾಹಿತಿಗೆ ಬ್ರೇಕ್

**ಮಾಹಿತಿ**

- ರಾಜ್ಯದಲ್ಲಿರುವ ಕಾರ್ಖಾನೆಗಳು 70
- ಕಬ್ಬು ಬೆಳೆ ಪ್ರದೇಶ 15 ಲಕ್ಷ ಎಕರೆ
- ಇಳುವರಿಯ ಅಂದಾಜು 7 ಕೋಟಿ ಟನ್
- ಕಬ್ಬು ಬೆಳೆಗಾರರು 30 ಲಕ್ಷ
- ರೈತರಿಗೆ ಬರಬೇಕಾಗಿರುವ ಅಂದಾಜು ಬಾಕಿ 380 ಕೋಟಿ ರೂ.

---



# ಬಾಳು ಬೆಳಗುತ್ತಿರುವ ಬಾಳೆ ದಿಂಡು

- ಯೂಟ್ಯೂಬ್‌ನಲ್ಲಿ ಪ್ರಧಾನಿ ಮೋದಿ ಕೊಟ್ಟ ಐಡಿಯಾ
- ಕಸದಿಂದ ರಸ ತಯಾರಿಸಿ ಉದ್ಯಮಿಯಾದ ಮಹಿಳೆ

ತೆಂಗಿನಂತೆ ಈಗೀಗ ಬಾಳೆಯೂ ಬಹೂಪಯೋಗಿಯಾಗುತ್ತಿದ್ದು, ಬಾಳೆ ಹಣ್ಣು, ಬಾಳೆ ಎಲೆಗಳ ಬಳಿಕ ಇದೀಗ ಬಾಳೆದಿಂಡಿನ ಸದುಪಯೋಗವು ನಡೆಯುತ್ತಿದೆ. ಬಾಳೆ ಬೆಲೆ ಕುಸಿತದಿಂದ ಸಂಕಷ್ಟಕ್ಕೀಡಾಗುತ್ತಿದ್ದ ರೈತರಿಗೆ ಬಾಳೆಕಾಯಿ ಹುಡಿ ಮಾಡಿ ಮೌಲ್ಯವರ್ಧನೆ ಮಾಡುವ ಪ್ರಯೋಗಗಳು ನಡೆದಿದ್ದವು. ಇದನ್ನು ಮೈದಾಹಿಟ್ಟಿಗೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಇದೀಗ ಕಾಯಿ ಬಿಟ್ಟ ನಂತರ ಕಡಿದು ಹಾಕುವ ಬಾಳೆ ದಿಂಡಿನಿಂದ ವಿವಿಧ ಉತ್ಪನ್ನಗಳನ್ನು ತಯಾರಿಸುವ ಪ್ರಯತ್ನಗಳು ಆರಂಭವಾಗಿವೆ. ಅನುಪಯುಕ್ತವಾಗಿ ಬಿಸಾಡುವ ಬಾಳೆದಿಂಡುಗಳು ರೈತರಿಗೆ ಒಂದಿಷ್ಟು ಆದಾಯ ತಂದುಕೊಡಬಹುದು.

ರಾಜು ಹೊಸೂರು ಸಂತೇಮರಹಳ್ಳಿ



ಬಾಳೆಕಂಬಗಳದ್ದೇ ಬಿಸಾಡುವ ಅಥವಾ ಬೆಂಕಿ ಹಚ್ಚಿ ಸುಟ್ಟುಹಾಕುವ ಬಾಳೆ ದಿಂಡಿನಿಂದಲೂ ಉಪಯೋಗಗಳಿವೆ. ಇವುಗಳಿಂದ ಉತ್ಪನ್ನಗಳನ್ನು ತಯಾರಿಕೆ ಮಾಡಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಕೊಟ್ಟ ಸಲಹೆಯನ್ನು ಯೂಟ್ಯೂಬ್‌ನಲ್ಲಿ ನೋಡಿದ ಮಹಿಳೆ ಈಗ ಉದ್ಯಮಿಯಾಗಿ ಹೊರಹೊಮ್ಮಿದ್ದಾರೆ.

ಮೂಲತಃ ಗುಂಡ್ಲುಪೇಟೆ ತಾಲೂಕು ಆಲಹಳ್ಳಿ ಗ್ರಾಮದ ಎಂ.ಟೆಕ್ ಪದವೀಧರೆ ವರ್ಷಾ ಬಾಳೆ ದಿಂಡಿನಿಂದ ಉತ್ಪನ್ನಗಳ ತಯಾರಿಕೆ ಮಾಡುವ ಉದ್ಯಮ ಶುರು ಮಾಡಿದ್ದಾರೆ. ಅದಕ್ಕಾಗಿ ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಗ್ರಾಮದಲ್ಲಿ 'ಆಕೃತಿ ಇಕೋ ಫ್ರೆಂಡ್ಲಿ ಎಂಟರ್‌ಪ್ರೈಸಸ್' ಘಟಕ ಸ್ಥಾಪನೆ ಮಾಡಿದ್ದಾರೆ. ಮೈಸೂರಿನ ಖಾಸಗಿ ಕಂಪನಿಯ ಉದ್ಯೋಗಿ ಶ್ರೀಕಂಠಸ್ವಾಮಿ ಮತ್ತು ವರ್ಷಾ ದಂಪತಿ ಕರೋನಾ 2ನೇ ಲಾಕ್‌ಡೌನ್ ಸಂದರ್ಭದಲ್ಲಿ ಹೊಸದಾಗಿ ಉದ್ಯಮ ಶುರು ಮಾಡಬೇಕೆಂದು ಯೋಚಿಸಿದ್ದರು. ಐಡಿಯಾಗಳಿಗಾಗಿ ಯೂಟ್ಯೂಬ್ ನೋಡುತ್ತಿದ್ದಾಗ ಪ್ರಧಾನಿ ನರೇಂದ್ರ ಮೋದಿ ಅವರ ಹಿನ್ನೆಲೆ ಧ್ವನಿ ಮತ್ತು ಬಾಳೆ ದಿಂಡಿನಿಂದ ಉತ್ಪನ್ನ ತಯಾರಿಸುವ ಉದ್ಯಮ ನಡೆಯುತ್ತಿರುವ ಹಳ್ಳಿಗಳ ವಿಡಿಯೋ ಕಣ್ಣಿಗೆ ಬಿದ್ದಿದೆ. ಆನುಪಯುಕ್ತವೆಂದು ಪರಿಗಣಿಸುವ ಬಾಳೆ ದಿಂಡಿನಿಂದ ಪೇಪರ್ ಕಪ್, ದಾರ, ಬಾಸೆ, ಬಗೆಬಗೆಯ ತಿಂಡಿ-ತಿನಿಸುಗಳನ್ನು ಸಿದ್ಧಪಡಿಸುವ ಮಾಹಿತಿ ಆ ದೃಶ್ಯಾವಳಿಯಲ್ಲಿ ಇತ್ತು. ಅದರಿಂದ ಪ್ರೇರಣೆಗೊಂಡ ದಂಪತಿ, ಬಾಳೆ ದಿಂಡಿನ ಉತ್ಪನ್ನ ತಯಾರಿಕೆಯ ಉದ್ಯಮ ಶುರು ಮಾಡಲು ಚಿಂತನೆ ನಡೆಸಿದರು. ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಜಿಲ್ಲೆಯ ಸಮೀಪದಲ್ಲೇ ಇರುವ ತಮಿಳುನಾಡಿನ ಕೊಯಮತ್ತೂರಿನಲ್ಲಿ ಇಕೋ ಗ್ರೀನ್ ಯೂನಿಟ್ ಸ್ಥಾಪಿಸಿರುವುದು ತಿಳಿಯಿತು. ಅಲ್ಲಿಗೆ ಹೋದ ದಂಪತಿಗೆ ಪ್ರತ್ಯಕ್ಷ ಅನುಭವವಾಯಿತು. ಬ್ಯಾಂಕ್‌ನಿಂದ ಸಾಲ ಪಡೆಯುತ್ತ ತಮ್ಮ ಬಳಿ ಇದ್ದ 3 ಲಕ್ಷ ರೂ. ಬಂಡವಾಳ ಹೂಡಿ 2 ಯಂತ್ರೋಪಕರಣಗಳನ್ನು ಖರೀದಿ ಮಾಡಿದರು. ಬಾಳೆ ದಿಂಡಿನಿಂದ ಉತ್ಪನ್ನಗಳನ್ನು ತಯಾರಿಸುವ ಘಟಕವನ್ನು ಉಮ್ಮತ್ತೂರಿನಲ್ಲಿ ಸ್ಥಾಪಿಸಿ ಕೆಲಸ ಶುರು ಮಾಡಿದ್ದಾರೆ.



### ಕಲ್ಪವೃಕ್ಷ ಬಾಳೆ

ತೆಂಗು ಮಾತ್ರವಲ್ಲದೆ ಬಾಳೆಯೂ ಕಲ್ಪವೃಕ್ಷ ಎನ್ನುವುದನ್ನು ಸಾಬೀತು ಮಾಡಲು ಹೊರಟಿದೆ 'ಆಕೃತಿ ಇಕೋ ಫ್ರೆಂಡ್ಲಿ ಎಂಟರ್‌ಪ್ರೈಸಸ್'. ಸದ್ಯಕ್ಕೆ ತಿನ್ನಲು ಬಾಳೆಹಣ್ಣು, ಊಟಕ್ಕೆ ಎಲೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮುಂದುವರಿದು ಬಾಳೆ ದಿಂಡಿನಿಂದ ಜಾಮ್ ತಯಾರಿಕೆಯಾಗುತ್ತಿದೆ. ಇದಲ್ಲದೆ, ಬಾಳೆ ದಿಂಡಿನ ರಸದಲ್ಲಿ ಪೊಟ್ಯಾಷಿಯಂ ಅಂಶ ಇರುವುದನ್ನು ವರ್ಷಾ ಅವರು ಗುರುತಿಸಿದ್ದು, ಇದರಿಂದ ಸಾವಯವ ಪೊಟ್ಯಾಷಿಯಂ, ದಿಂಡಿನಿಂದ ಬರುವ ನಷ್ಟಿ ಶಸವನ್ನು ಭೂಮಿಗೆ ಹಾಕಿ ಕೆಳಸಿ ಸಾವಯವ ಗೊಬ್ಬರ ಮಾಡುವ ಚಿಂತನೆ ಮಾಡಿದ್ದಾರೆ. ಜತೆಗೆ, ಬಾಳೆ ದಿಂಡಿನ ರಸದಿಂದ ವೈನ್ ತಯಾರಿಕೆ ಮಾಡಬಹುದು ಎಂಬುದನ್ನೂ ಕಂಡುಕೊಂಡಿದ್ದಾರೆ.



### ಬಾಳೆ ದಿಂಡಿನಿಂದ ಚಾಪೆ ತಯಾರಿಕೆ

ಸಾಮಾನ್ಯವಾಗಿ ರೈತರು ಬಾಳೆ ಬೆಳೆದ ಬಳಿಕ ದಿಂಡನ್ನು ಕತ್ತರಿಸಿ ಅದಕ್ಕೆ ಜಮೀನಿನಲ್ಲೇ ಬೆಂಕಿ ಹಚ್ಚುತ್ತಾರೆ, ಇಲ್ಲದಿದ್ದರೆ ಬಿಸಾಡುತ್ತಾರೆ. ಆದರೆ ಇವುಗಳನ್ನು 'ಆಕೃತಿ ಇಕೋ ಫ್ರೆಂಡ್ಲಿ ಎಂಟರ್‌ಪ್ರೈಸಸ್' ಬಳಕೆ ಮಾಡಿಕೊಂಡು ಚಾಪೆ, ದಾರ, ಮ್ಯಾಟ್ ತಯಾರು ಮಾಡುತ್ತಿದೆ. ಉಮ್ಮತ್ತೂರು ಸುತ್ತಮುತ್ತಲಿನ ಜಮೀನುಗಳಲ್ಲಿ ಕೆಲಸ ಮಾಡುವ ಕೂಲಿಕಾರರನ್ನು ಸಂಪರ್ಕಿಸಿ ಬಾಳೆ ಕಟಾವು ಮಾಡಿಸುವ ಜಮೀನು ಮಾಲೀಕರ ಮಾಹಿತಿ ಪತ್ತೆ ಮಾಡಿ, ಬಳಿಕ ಅವರಿಗೆ ತಾವು ಶುರು ಮಾಡಿರುವ ಉದ್ಯಮದ ಬಗ್ಗೆ ತಿಳಿಸಿ, ಅನುಪಯುಕ್ತ ಬಾಳೆ ದಿಂಡನ್ನು ಪಡೆದುಕೊಳ್ಳುತ್ತಿದ್ದಾರೆ. 2 ಯಂತ್ರಗಳಲ್ಲಿ ದಿನಕ್ಕೆ 4 ಮೀಟರ್ ಚಾಪೆ ಸಿದ್ಧವಾಗುತ್ತಿದೆ. ಕೊಯಮತ್ತೂರಿನ ಇಕೋ ಗ್ರೀನ್ ಯೂನಿಟ್‌ನವರು ಚಾಪೆಯನ್ನು ತಿಂಗಳಿಗೊಮ್ಮೆ ಖರೀದಿ ಮಾಡಲಿದ್ದು, ಬ್ಯಾಗ್, ಯೋಗ ಮ್ಯಾಟ್, ದಾರ ಇತರ ಉತ್ಪನ್ನಗಳನ್ನೂ ಸಿದ್ಧಪಡಿಸಿ ಮಾರಾಟ ಮಾಡುತ್ತಿದ್ದಾರೆ.

### ಬ್ಯಾಂಕ್ ನೆರವಿಗಾಗಿ ಅಲೆದಾಟ



ಬಾಳೆ ದಿಂಡಿನ ಉತ್ಪನ್ನ ತಯಾರಿಕಾ ಘಟಕ ಸ್ಥಾಪನೆಗೆ ಬಂಡವಾಳ ಹೂಡಲು ಸಾಲ ಸೌಲಭ್ಯಕ್ಕಾಗಿ ವರ್ಷಾ ಅವರು ಬ್ಯಾಂಕ್ ಸಂಪರ್ಕಿಸಿದ್ದಾರೆ. ಸಾಲ ಪಡೆಯಲು ಅನುಸರಿಸಬೇಕಾದ ನಿಯಮಗಳು, ಪರತ್ತುಗಳ ಪ್ರಕಾರ ದಾಖಲೆ ಒದಗಿಸುವಿಕೆಗೆ ಅಡ್ಡಿಗಳು ಉಂಟಾಗಿದೆ. ಸುಲಭವಾಗಿ ಬ್ಯಾಂಕ್‌ನಿಂದ ಸಾಲ ಸೌಲಭ್ಯ ಪಡೆಯಲು ಸಾಧ್ಯವಿಲ್ಲ ಎಂದು ತಿಳಿದ ವರ್ಷಾ ಅವರು 3 ಲಕ್ಷ ರೂ. ಬಂಡವಾಳವನ್ನು ಕೈಯಿಂದ ಭರಿಸಿ ಉದ್ಯಮ ಶುರು ಮಾಡಿದ್ದಾರೆ.

**ಉದ್ಯಮ ವಿಸ್ತರಣೆ ಕನಸು**

ವರ್ಷಾ ಅವರ ಹೊಸ ಉದ್ಯಮಕ್ಕೆ ಪತಿ ಶ್ರೀಕಂಠಸ್ವಾಮಿ ಸಾಥ್ ನೀಡಿದ್ದಾರೆ. ಗುಂಡ್ಲುಪೇಟೆ ತಾಲೂಕಿನ ಆಲಹಳ್ಳಿಯ ಲೇ.ಪುಟ್ಟಣ್ಣಶೆಟ್ಟಿ ಮತ್ತು ಜಯಲಕ್ಷ್ಮೀ ದಂಪತಿ ತಮ್ಮ ಪುತ್ರ ಶ್ರೀಕಂಠಸ್ವಾಮಿ, ತಮ್ಮ ವಿದ್ಯಾಭ್ಯಾಸಕ್ಕಾಗಿ ಇದ್ದ ಜಮೀನು ಮಾರಿದ್ದರು. ಅಂದಿನಿಂದಲೂ ಜಮೀನು ಖರೀದಿ ಮಾಡಬೇಕೆಂಬ ಆಸೆ ಇತ್ತು. ಆಂತೆಯೆ, ಉಮ್ಮತ್ತೂರಿನಲ್ಲಿ 3 ಎಕರೆ ಜಮೀನು ಖರೀದಿ ಮಾಡಿದ್ದಾರೆ. ಇಲ್ಲಿ ಬಾಳೆ, ಮಾವು, ತೆಂಗು ಹಾಕಿದ್ದು, ಜತೆಗೆ ಬಾಳೆ ದಿಂಡಿನಿಂದ ಉತ್ಪನ್ನಗಳನ್ನು ತಯಾರಿಕೆ ಮಾಡುವ ಘಟಕ ಸ್ಥಾಪಿಸಿದ್ದಾರೆ. ಇದರಿಂದ ಏಏರಿಗೆ ಉದ್ಯೋಗ ಸಿಕ್ಕಿದೆ. ಜಿಲ್ಲೆಯಲ್ಲಿ ಬಾಳೆ ಬೆಳೆಯುವ ರೈತರ ಸಂಖ್ಯೆ ಹೆಚ್ಚಿದೆ. ಫಲ ಕೈಸೇರಿದ ಮೇಲೆ ಬಿಸಾಡುವ ದಿಂಡುಗಳನ್ನು ಆರಂಭದಲ್ಲಿ ರೈತರಿಂದ ಉಚಿತವಾಗಿ ಪಡೆದುಕೊಳ್ಳಲಾಗುತ್ತಿತ್ತು. ಉದ್ಯಮ ದೊಡ್ಡ ಮಟ್ಟಕ್ಕೆ ಬೆಳೆದರೆ ರೈತರಿಗೆ ಒಂದು ದಿಂಡಿಗೆ 8ರಿಂದ 10 ರೂ. ನೀಡಿ ಖರೀದಿ ಮಾಡುವ ಚಿಂತನೆಯೂ ಇದೆ. ಉದ್ಯಮ ಶುರು ಮಾಡಿ ಕೇವಲ 15 ದಿನಗಳಾಗಿವೆ. 6 ತಿಂಗಳು ಕನಿಷ್ಠ 20 ಸಾವಿರ ರೂ. ಆದಾಯ ದೊರೆಯಬಹುದೆಂದು ನಿರೀಕ್ಷೆ ಇದೆ. ಬಾಳೆ ದಿಂಡಿನಿಂದ ತಯಾರಿಸಿದ ಚಾಪೆಯನ್ನು ಕೊಯಮತ್ತೂರಿನ ಕಂಪನಿ ನಮ್ಮಿಂದ ಖರೀದಿ ಮಾಡುತ್ತದೆ. ಒಂದು ಮೀಟರ್ ಚಾಪೆಗೆ 120ರಿಂದ 130 ರೂ. ಕೊಡುತ್ತದೆ. ಮುಂದಿನ ದಿನಗಳಲ್ಲಿ ಉತ್ಪಾದನೆ ಹೆಚ್ಚಿಳ ಮಾಡಿ ಆದಾಯ ದ್ವಿಗುಣಗೊಳಿಸಿಕೊಳ್ಳುತ್ತೇವೆ ಎಂಬುದು ವರ್ಷಾ ಅವರ ಹೇಳಿಕೆ.

---

ಮಣ್ಣು ಪರೀಕ್ಷಾ–ಕಿಸಾನ್ ಸುವಿಧಾ ಕೇಂದ್ರದಿಂದ ರೈತರಿಗೆ ಲಾಭ

# ಆಧುನಿಕ ತಂತ್ರಜ್ಞಾನ ಕೃಷಿ ಖುಷಿ

◆ ರಾಚಪ್ಪಾ ಜಂಬಗಿ

**ಕಲಬುರಗಿ:** ಕೇಂದ್ರ ರಾಸಾಯನಿಕ, ರಸಗೊಬ್ಬರ ಸಚಿವಾಲಯದ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಕೆಮಿಕಲ್ಸ್ ಆ್ಯಂಡ್ ಫರ್ಟಿಲೈಜರ್ಸ್ ಲಿಮಿಟೆಡ್ ಕಂಪನಿಯ ಮಣ್ಣು ಪರೀಕ್ಷಾ ಪ್ರಯೋಗಾಲಯ ಮತ್ತು ಕಿಸಾನ್ ಸುವಿಧಾ ಕೇಂದ್ರ ಉದ್ಘಾಟನೆ ಮಾಡುವುದರ ಮೂಲಕ ಕೇಂದ್ರ ಸರ್ಕಾರ ರೈತರಿಗೆ ಆಸರೆಯಾಗಿದೆ.

ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಪಂಚಾಯತ್ ಕಚೇರಿ ಹತ್ತಿರದ ತೋಟಗಾರಿಕೆ ಇಲಾಖೆಯಲ್ಲಿ ರೈತರಿಗೆ ಅನುಕೂಲ ಆಗಲೆಂದು ಮಣ್ಣಿನ ಜ್ಞಾನದ ಬಗ್ಗೆ ಸಶಕ್ತಗೊಳಿಸಲು ಮಾಹಿತಿ, ಭೂಮಿಯ ಮಣ್ಣಿನ ಪ್ರಮುಖ ಸೂಕ್ಷ್ಮ ಪೋಷಕಾಂಶಗಳ ಬಗ್ಗೆ ಮನವರಿಕೆ ಮಾಡಲು ಮತ್ತು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡುವ ಸಲುವಾಗಿ, ಮಣ್ಣು ಪರೀಕ್ಷಾ ಪ್ರಯೋಗಾಲಯ ಮತ್ತು ಕಿಸಾನ್ ಸುವಿಧಾ ಕೇಂದ್ರ ಉದ್ಘಾಟನೆ ಮಾಡಿ ರೈತರಿಗೆ ನೆರವಾಗುವ ಉದ್ದೇಶದಿಂದ ಮಣ್ಣು ಪರೀಕ್ಷಾ ಪ್ರಯೋಗಾಲಯ ಮತ್ತು ಕಿಸಾನ್ ಸುವಿಧಾ ಕೇಂದ್ರ ಸ್ಥಾಪಿಸಲಾಗಿದೆ.

೪



### ಕೇಂದ್ರಗಳ ಮುಖ್ಯ ಉದ್ದೇಶ

ರೈತರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು, ಅವರ ಸರ್ವತೋಮುಖ ಅಭಿವೃದ್ಧಿ, ಮಣ್ಣಿನ ಆರೋಗ್ಯ ಸುಧಾರಣೆ, ಪ್ರಮುಖ ಪೋಷಕಾಂಶಗಳು ಮತ್ತು ಸೂಕ್ಷ್ಮ ಪೋಷಕಾಂಶಗಳ ಸಮತೋಲಿತ ಬಳಕೆ, ಸುಧಾರಿತ ಕೃಷಿ ತಂತ್ರಜ್ಞಾನದ ಅಳವಡಿಕೆಗೆ ಶಿಫಾರಸು ಮಾಡುವುದು, ಬೆಳೆ ಮಾದರಿಗಳನ್ನು ಶಿಫಾರಸು ಮಾಡುವುದು, ಸಾವಯವ

FOOD SECURITY

# Fix the Roof When It Isn't Raining



Giriraj Amarnath

Forecasts of a normal monsoon this year will offer little relief to farmers having endured a record-breaking heatwave this summer across the country. Yet, the two seasons embody the paradox of climate risks and impacts facing Indian agriculture. If the time to repair the roof is when the sun is shining, the time for agriculture to adapt to climate hazards is when the monsoon is on the side of food security.

A June 2022 study, 'Climate-related hazards and Indian food supply: Assessing the risk using recent historical data' (bit.ly/3aWftzu), reveals the interconnected climate hazards -- droughts, floods, landslides, extreme temperatures, etc -- affecting the food supply at both national and state levels in India, identifying the priorities for adaptation according to different risks, crops and regions.

With this new understanding, we can begin to increase the precision of climate action and resilience policies for national food security by minimising the impact of potential climate extremes, which affect *all* states, regardless of whether they experience them physically or not.

The findings reinforce the need to adapt to the most appropriate climate risk in specific contexts. Understanding which climate risks pose the greatest threat to food systems can help policymakers focus on the most appropriate interventions that deliver greater impact for those who need them the most.

Drought, for instance, has by far the greatest impact on production and the inter-state food trade, with the recent heatwave potentially causing a 6% drop in wheat production. With drought only set to become more prevalent due to climate change, farmers should be incentivised to adopt better water management practices, including watershed management, in the most affected areas, particularly the northwestern region.

We also need to focus adaptation on the most vulnerable crops. Just as different regions experience different hazards, different commodities too face different risks. Cereal crops, which represent just under half of India's total food supply, are at greatest risk, particularly to droughts but also across all other climate hazards.

Adaptation can also mean diversification. Farmers can not only improve their resilience to climate hazards but also continue to deliver the food upon which the nation relies. Failing to recognise the different impacts climate hazards can have at a sub-national level not only means those regions will face greater impact, but that they will also pose a greater risk to the national food supply, which is, ultimately, the sum of the whole.



FILE PHOTO

**Take cover now**

The largest climate hazard risks to state food supply are in Bihar, Madhya Pradesh, and Assam. These most at-risk areas should be prioritised with investments in early warning systems, and sustainable adaptation of agriculture.

For instance, the initiative, Building Systemic Resilience Against Climate Variability and Extremes (ClimBeR) builds on years of CGIAR climate research plans to bundle climate information services, bottom-up approaches, integrated climate and water-resilient practices within a framework of supportive, socially-inclusive policies and *institutions. These projects are often invaluable in building the long-term resilience of farmers.*

During crises, at-risk regions need support with food assistance, particularly by smoothening access to food reserves, or through agricultural contingency plans, such as providing early warning information and agronomic advice. Also, with an increased risk of food shortages due to climate change, there is also a clear need for infrastructure that can support relief during times of crisis. This includes food storage and road connectivity for market access, so that the most at-risk regions can effectively access the assistance they will require during periods of exposure to climate hazards.

When times are good and the rains fall as expected, it is tempting to see this as 'business as normal'. But it is precisely when food systems have the luxury of preferred conditions that governments, environmentalists and farmers can afford to take steps to diversify, increase capacity, and build resilience for future extremes. That way, when the rains do fade out, droughts set in, temperatures rise, the entire food system is ready to weather the storm.

*The writer is research group leader, water risk to development and resilience, International Water Management Institute (IWMI), Battaramulla, Sri Lanka*

13-06-2022 Times of Ind Pg 14

13-06-2022 Vsv Pg 05

### ಕಾಳಸಂತೆಯಲ್ಲಿ ಮಾರಾಟ ನಡೆದಿದ್ದರೂ, ಕಣ್ಮುಚ್ಚಿ ಕುಳಿತ ಇಲಾಖೆ | ಬಿತ್ತನೆ ಬೀಜ, ರಸಗೊಬ್ಬರ ಕೊರತೆಯಿಂದ ಕಂಗೆಟ್ಟ ರೈತ

# ಕೃತಕ ಅಭಾವ ಸೃಷ್ಟಿ: ರಸಗೊಬ್ಬರ ದುಬಾರಿ

ನ್ಯೂ ದೇವು ನಾಗನೂರ ಕೊಪ್ಪಳ

ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೃತಕ ಅಭಾವ ಸೃಷ್ಟಿಯಾಗಿದೆ. ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ನಡೆದಿದ್ದರೂ ಕೃಷಿ ಇಲಾಖೆ ಕಣ್ಮುಚ್ಚಿ ಕುಳಿತಿದೆ.

ರಾಜ್ಯದಲ್ಲಿ ಮುಂಗಾರು ಹಂಗಾಮು ಶುರುವಾಗಿದೆ. ಭೂಮಿ ಹದ ಮಾಡಿಕೊಂಡಿದ್ದ ರೈತ ಕಳೆದ ವಾರ ಸುರಿದ ಮಳೆಗೆ ಬಿತ್ತನೆಗೆ ತಯಾರಿ ನಡೆಸಿದ್ದಾನೆ. ಆದರೆ, ರಾಜ್ಯದಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಕೊರತೆ ರೈತರನ್ನು ಕಂಗೆಡಿಸಿದೆ. ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ 26.76 ಲಕ್ಷ ಮೆಟ್ರಿಕ್ ಟನ್ ವಿವಿಧ ರಸಗೊಬ್ಬರದ ಬೇಡಿಕೆ ಇದೆ. ಈ ಪೈಕಿ ಏಪ್ರಿಲ್‌ನಿಂದ ಜೂನ್‌ವರೆಗೆ 12.5 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆಯಾಗಿದೆ. ಇದರಲ್ಲಿ 7.34 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಯಾಗಿದೆ. ಇನ್ನೂ 7.14 ಲಕ್ಷ ಮೆಟ್ರಿಕ್ ಟನ್ ದಾಸ್ತಾನು ಇದೆ ಎಂಬುದು ಕೃಷಿ ಇಲಾಖೆಯ ಮಾಹಿತಿ.

ಈ ಪ್ರಮಾಣದ ರಸಗೊಬ್ಬರ ಎಲ್ಲಿ ದಾಸ್ತಾನು ಆಗಿದೆ. ಸಹಕಾರ ಸಂಘಗಳಲ್ಲಿ ಎಷ್ಟಿದೆ. ಖಾಸಗಿ ಮಾರಾಟಗಾರರ ಬಳಿ ಎಷ್ಟಿದೆ ಎಂಬ ಮಾಹಿತಿಯನ್ನು ಕೃಷಿ ಇಲಾಖೆಯೇ ಬಹಿರಂಗಪಡಿಸಬೇಕು. ಡಿಎಪಿ, ಕಾಂಪ್ಲೆಕ್ಸ್ ಹಾಗೂ ಯೂರಿಯಾ ರಸಗೊಬ್ಬರ ದರ ಎಷ್ಟಿದೆ ಎಂಬ ಸ್ಪಷ್ಟ ಮಾಹಿತಿ ಫಲಕವನ್ನು ಅಂಗಡಿಗಳ ಮುಂದೆ ಹಾಕಬೇಕು. ಆದರೆ, ಯಾವುದೇ ಕಾನೂನು ಪಾಲನೆಯಾಗುತ್ತಿಲ್ಲ.

**ಹೆಚ್ಚಿನ ದರಕ್ಕೆ ಮಾರಾಟ:** ಕೃಷಿ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದ ಪರಿಣಾಮ ರಸಗೊಬ್ಬರ ಸಮರ್ಪಕ ಪೂರೈಕೆಯಾಗುತ್ತಿಲ್ಲ. ಯಾವುದೇ ಖಾಸಗಿ ಅಂಗಡಿಗಳ ಮುಂದೆ ಗೊಬ್ಬರದ ದರ ಪಟ್ಟಿ ಇಲ್ಲ. ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ಎಗ್ಗಿಲ್ಲದೇ ಸಾಗಿದೆ. ಪ್ರಸ್ತುತ ಡಿ ಎಪಿ ದರ 1350 ರು. ಇದೆ ಎಂಬುದು ಕೃಷಿ ಇಲಾಖೆ ಮಾಹಿತಿ. ಆದರೆ,



- ಅಂಗಡಿ ಮುಂದೆ ದರ ಪಟ್ಟಿ ಇಲ್ಲ
- ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ
- ಜಾಗೃತ ದಳ ಸಿಬ್ಬಂದಿ ನಿಷ್ಕ್ರೀಯತೆ

ಕಾಳಸಂತೆಯಲ್ಲಿ 1450ರಿಂದ 1500 ರು.ವರೆಗೆ ಗೊಬ್ಬರ ಮಾರಾಟವಾಗುತ್ತಿದೆ.

**ಹೊದ್ದು ಮಲಗಿದ ಜಾಗೃತ ದಳ:** ರಸಗೊಬ್ಬರದ ಕೃತಕ ಅಭಾವ ಸೃಷ್ಟಿ ನಿಯಂತ್ರಿಸಲು ಹಾಗೂ ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ತಡೆಯಲು ಕೃಷಿ ಇಲಾಖೆ ಜಾಗೃತ ದಳ ರಚಿಸಲಾಗಿದೆ. ಈ ಅಧಿಕಾರಿಗಳು ಖಾಸಗಿ ರಸಗೊಬ್ಬರ ಅಂಗಡಿ ಮೇಲೆ ನಿರಂತರ ದಾಳಿ ನಡೆಸಿ ದರ ಪಟ್ಟಿ ಪರಿಶೀಲನೆ ಮಾಡಬೇಕು. ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರೆ ದೂರು ದಾಖಲಿಸಬೇಕು. ಆದರೆ, ಜಾಗೃತ ದಳ ಮಾತ್ರ ಹೊದ್ದು ಮಲಗಿದೆ. ಪರಿಣಾಮ ಖಾಸಗಿ ರಸಗೊಬ್ಬರ ಮಾರಾಟಗಾರರು ರೈತರ ರಕ್ತ ಹೀರುತ್ತಿದ್ದಾರೆ.

ಅತಿವೃಷ್ಟಿಯಿಂದ ಕಂಗಾಲಾಗಿದ್ದ ರೈತನಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಕೊರತೆಯ ಸುದ್ದಿ ಗಾಯದ ಮೇಲೆ ಬರೆ ಎಳೆದಂತಾ ಗಿದೆ. ಇದಕ್ಕೆ ಕಡಿವಾಣ ಹಾಕುವ ಅಗತ್ಯವಿದೆ.



ರಾಜ್ಯದಲ್ಲಿ ರಸಗೊಬ್ಬರ ಸಾಕಷ್ಟು ದಾಸ್ತಾನು ಇದೆ. ಸಹಕಾರ ಸಂಘಗಳಲ್ಲಿ ಹಾಗೂ ಖಾಸಗಿ ಅಂಗಡಿಗಳಲ್ಲಿ ರಸಗೊಬ್ಬರ ಲಭ್ಯವಿದೆ. ಬೀಜ ಹಾಗೂ ರಸಗೊಬ್ಬರ ಕೊರತೆ ಇಲ್ಲ. ರೈತರು ಆತಂಕಪಡುವ ಅಗತ್ಯವಿಲ್ಲ.

-ಬಿ.ಸಿ.ಪಾಟೀಲ್ ಕೃಷಿ ಸಚಿವ

ಡಿಎಪಿ ಹಾಗೂ ಕಾಂಪ್ಲೆಕ್ಸ್ ಗೊಬ್ಬರ ಸಿಗುತ್ತಿಲ್ಲ. ಯಾವ ಅಂಗಡಿಯ ಮುಂದೆಯೂ ಗೊಬ್ಬರದ ದರ ಪಟ್ಟಿ ಹಾಕಿಲ್ಲ. ಖಾಸಗಿ ಮಾರಾಟ ಗಾರರು ಹೆಚ್ಚಿನ ದರಕ್ಕೆ ಗೊಬ್ಬರ ಮಾರಾಟ ಮಾಡುತ್ತಿದ್ದಾರೆ. ಕೃಷಿ ಇಲಾಖೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ರೈತರ ಸಮಸ್ಯೆ ಕೇಳುವವರೇ ಇ ಲ್ಲದಂತಾಗಿದೆ.

-ದೊಡ್ಡಪ್ಪ ದೇಸಾಯಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಗಂಗಾವತಿ